

# ಮೊಲ ಕಲಿಸಿದ ಪಾಠ

ಒಂದು ಕಾಡಿನಲ್ಲಿ ಗುಳ್ಳೆನರಿಯೊಂದು ಇತ್ತು. ಕದ್ದು ತಿನ್ನುವುದು ಅದರ ಚಾಳಿ. ದುಡಿದು ಗಳಿಸುವುದನ್ನು ಅದು ತಿಳಿಯದು. ಒಂದು ಸಲ ಸುಲಭದಲ್ಲಿ ಹೊಟ್ಟೆ ತುಂಬಿಸಿಕೊಳ್ಳಬೇಕೆಂದು ಹಳ್ಳಿಗೆ ನುಗ್ಗಿತು. ಒಬ್ಬ ರೈತನ ಮನೆಯಲ್ಲಿದ್ದ ಕೋಳಿಗೂಡನ್ನು ಪ್ರವೇಶಿಸಿ ಹುಂಜವೊಂದನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿತು. ಅಷ್ಟರಲ್ಲಿ ರೈತನ ನಾಯಿ ಎಚ್ಚೆತ್ತು ಓಡಿಸಿಕೊಂಡು ಬಂದು ಅದರ ಕಾಲನ್ನು ಹಿಡಿಯಿತು. ರೈತ ದೊಣ್ಣೆಯೊಂದಿಗೆ ಬಂದು ಎರಡೇಟು ಬಾರಿಸಿದ. ನರಿಯ ನಾಲ್ಕು ಹಲ್ಲುಗಳು ಬಿದ್ದುಹೋದವು. ಕಾಲೊಂದು ಮುರಿಯಿತು. ಆದರೂ ಸಾವಿನ ದವಡೆಯಿಂದ ಪಾರಾಗಿ ಕಾಡು ಸೇರಿತು.

ಕಾಡಿನಲ್ಲಿ ಒಂದು ಮುದಿ ಕರಡಿ ಮೃಗಗಳಿಗೆ ಕಾಯಿಲೆ ಬಂದಾಗ ಚಿಕಿತ್ಸೆ ಮಾಡುತ್ತಿತ್ತು. ನರಿ ಅದರ ಬಳಿಗೆ ಹೋಗಿ ತನಗಾದ ಗಾಯಗಳಿಗೆ ಚಿಕಿತ್ಸೆ ಪಡೆಯಿತು. ಕರಡಿಯು, ‘ನಿನಗೆ ಮುರಿದುಹೋದ ಹಲ್ಲುಗಳು ಮತ್ತೆ ಬರಬೇಕಿದ್ದರೆ ಬಿಳಿಯ ಮೊಲದ ಮಾಂಸ ತಿನ್ನಬೇಕು. ಅದರ ಕೊಬ್ಬನ್ನು ಮೈಗೆ ತಿಕ್ಕಿಕೊಂಡರೆ ತುಂಡಾದ ಕಾಲು ಮೊದಲಿನಂತಾಗುತ್ತದೆ’ ಎಂದು ಉಪಚಾರಗಳನ್ನು ಹೇಳಿತು.

ಮೊದಲಿನಂತೆ ಬೇಟೆಯಾಡುವ ಶಕ್ತಿಯಿಲ್ಲದ ತಾನು ಮೊಲವನ್ನು ಹಿಡಿಯುವುದಾದರೂ ಹೇಗೆ ಎಂದು ಚಿಂತಿಸಿದ ನರಿಗೆ ಒಂದು ಉಪಾಯ ಹೊಳೆಯಿತು. ಅದರ ಗವಿಯ ಸನಿಹದಲ್ಲಿ ಒಂದು ಹೆಣ್ಣುಮೊಲ ಬಿಲದಲ್ಲಿ ವಾಸವಾಗಿರುವುದು ಅದಕ್ಕೆ ಗೊತ್ತಿತ್ತು. ಉಪಾಯದಿಂದ ಅದನ್ನು ಕಬಳಿಸಬೇಕು ಎಂದು ನಿರ್ಧರಿಸಿ ತಾನೊಂದು ಮುದಿಮೊಲದ ಹಾಗೆ ವೇಷಭೂಷಣಗಳನ್ನು ಧರಿಸಿತು. ಮೊಲವು ಕಾಯಿ– ಪಲ್ಲೆಗಳನ್ನು ಬಿಲಕ್ಕೆ ಹೊತ್ತು ತರುವಾಗ ಅದರ ಬಿಲದ ಬಳಿ ನಿಂತುಕೊಂಡಿತು. ದೂರದಿಂದ ಬರುವಾಗಲೇ ಮೊಲಕ್ಕೆ ಅನುಮಾನ ಬಂದಿತು. ಇಷ್ಟು ದೊಡ್ಡ ಗಾತ್ರದ ಮೊಲ ಸೃಷ್ಟಿಯಲ್ಲೇ ಇರಲಿಕ್ಕಿಲ್ಲ. ಹೀಗೆ ಇಲ್ಲಿ ನಿಂತ ಮೊಲದ ಹಿಂದೆ ಏನೋ ಮೋಸದ ವಾಸನೆಯಿದೆ ಎಂದುಕೊಂಡು ಪರೀಕ್ಷಿಸಿದಾಗ ನರಿ ಹೀಗೆ ವೇಷ ಧರಿಸಿರುವುದು ಗೊತ್ತಾಯಿತು. ಆದರೂ ಎದೆಗುಂದದೆ, ‘ಯಾರಲ್ಲಿ ನಿಂತಿರುವುದು?’ ಎಂದು ಕೇಳಿತು.

ನರಿ ಮೊಲದಂತೆ ಧ್ವನಿ ಬದಲಾಯಿಸಿ, ‘ನಾನಮ್ಮಾ, ನಿನ್ನ ತಾತ! ಇಷ್ಟು ಬೇಗ ಗುರುತೇ ಮರೆತು ಬಿಟ್ಟೆಯಾ?’ ಎಂದು ಕೇಳಿತು. ಮೊಲ ಸಂತೋಷದಿಂದ, ‘ತಾತನೇ? ನಾನು ನಿಮ್ಮನ್ನು ಮರೆಯುವುದುಂಟೆ? ಆದರೆ ಕಳೆದ ಸಲ ಬಂದಾಗ ನನಗೊಂದು ಹ್ಯಾಟು ತರುವುದಾಗಿ ಮಾತು ಕೊಟ್ಟಿದ್ದಿರಿ. ನನ್ನ ತಾತ ಹೌದಾದರೆ ಹ್ಯಾಟಿನೊಂದಿಗೆ ಬರಬೇಕಿತ್ತು. ನಾನು ನಿಮ್ಮನ್ನು ಮಾತನಾಡಿಸೋದೇ ಇಲ್ಲ’ ಎನ್ನುತ್ತ ಟುಣು ಟುಣು ಜಿಗಿಯುತ್ತ ಬಿಲದೊಳಗೆ ಸೇರಿತು. ನರಿಗೆ ನಿರಾಸೆಯಾದರೂ ಮರುದಿನ ಹ್ಯಾಟಿನೊಂದಿಗೆ ಬಂದು ಅದನ್ನು ಬಲೆಗೆ ಬೀಳಿಸಲು ನಿರ್ಧರಿಸಿ ಮನೆಗೆ ಹೊರಟಿತು. ಆ ವೇಳೆಗೆ ಕಾಡಿನಲ್ಲಿ ಒಬ್ಬಾತ ಹ್ಯಾಟು ಮಾರಿಕೊಂಡು ಬರುತ್ತ ಇದ್ದ. ನರಿ ಅವನ ಮುಂದೆ ಹೋಗಿ, ‘ಹುಲಿ ಮಹಾರಾಜರ ಸವಾರಿ ಈ ಕಡೆಗೆ ಬರುತ್ತಾ ಇದೆ. ತುಂಬ ಹಸಿದಿದ್ದಾರೆ’ ಎಂದಿತು. ಹುಲಿ ಎಂಬ ಪದ ಕೇಳುತ್ತಲೇ ಅವನು ಹೆದರಿಬಿಟ್ಟ. ಕೈಯಲ್ಲಿದ್ದ ಹ್ಯಾಟುಗಳನ್ನು ಅಲ್ಲಿಯೇ ಎಸೆದು ದಾರಿ ಕಂಡತ್ತ ಓಡಿಹೋದ.

ಮರುದಿನ ಮತ್ತೆ ಮೊಲದ ವೇಷ ಧರಿಸಿ ಒಂದು ಹ್ಯಾಟಿನೊಂದಿಗೆ ನರಿ ಹೋಯಿತು. ಮೊಲ ಮರಳಿ ಬರುವಾಗ, ‘ಬಾ ಮಗಳೇ, ಹ್ಯಾಟಿನೊಂದಿಗೆ ಬಂದಿದ್ದೇನೆ. ಹತ್ತಿರ ಬಂದು ತೆಗೆದುಕೋ’ ಎಂದು ಚಾಚಿತು. ಆದರೆ ಮೊಲ ಬಳಿಗೆ ಬರಲಿಲ್ಲ. ‘ನೀವೆಂಥ ಮರೆಗುಳಿ ತಾತ! ಯಾವಾಗಲೂ ಉಡುಗೊರೆ ಕೊಡುವ ಮೊದಲು ಕರಿದ ತಿಂಡಿಗಳ ಪೊಟ್ಟಣ ಎದುರಲ್ಲಿಡುತ್ತಿದ್ದಿರಿ. ಆದರೆ ಈ ದಿನ ಉಡುಗೊರೆ ಮೊದಲು ಕೊಟ್ಟರೆ ತಗೊಳ್ಳುತ್ತೀನಾ? ನನಗೆ ಬೇಡ’ ಎಂದು ಹುಸಿಕೋಪ ತೋರಿಸಿ ಬಿಲದೊಳಗೆ ಹೋಯಿತು.

ನರಿ ಅಂದು ಕೂಡ ನಿರಾಸೆಯಿಂದ ಹಿಂತಿರುಗಿತು. ಆಗ ದಾರಿಯಲ್ಲಿ ಒಬ್ಬ ಕರಿದ ತಿಂಡಿಗಳ ವ್ಯಾಪಾರಿ ಸಿಕ್ಕಿದ. ನರಿ ಅವನೊಂದಿಗೆ, ‘ನೀನು ಜಿಡ್ಡು ಎಣ್ಣೆಯಲ್ಲಿ ತಿಂಡಿ ತಯಾರಿಸಿ ಮಾರುತ್ತಿದ್ದೀ ಅಂತ ಊರಿನ ದೊರೆಗೆ